

ಆರನೇ ದಲೈಲಾಮಾ ಹುಟ್ಟಿದ ಮನೆ

ಯೋಧ ನಮಗೆಲ್ಲ ಸ್ಥಳದ ವಿವರಣೆ ನೀಡಿದರು. ಉಭಯ ದೇಶಗಳ ಮಧ್ಯೆ ವಿವಾದಗಳಾದಾಗ ಎರಡೂ ಕಡೆಯ ಗಡಿ ಕಾವಲು ಸಿಬ್ಬಂದಿಯವರ ಸಭೆ (ಬಿಪಿಎಂ) ನಡೆಯುವ ಸ್ಥಳ ಅಲ್ಲಿಯೇ ಇತ್ತು.

ಅಲ್ಲೊಂದು ಪುಟ್ಟ ಬೆಣಚುಕಲ್ಲುಗಳ ದಿಬ್ಬವಿತ್ತು. ಇಲ್ಲಿಯವರೆಗೆ ಬಂದ ಪ್ರವಾಸಿಗರು, 'ಇಂತಹ ಪ್ರತಿಕೂಲ ವಾತಾವರಣದಲ್ಲೂ ಗಡಿ ಸಂರಕ್ಷಿಸುವ ಯೋಧರಿಗೆ ಕೃತಜ್ಞತೆಗಾಗಿ' ಒಂದೊಂದು ಕಲ್ಲನ್ನು ಇಡುವುದರಿಂದಾದ ದಿಬ್ಬವದು. 1962ರ ಯುದ್ಧಾನಂತರ ಮುಚ್ಚಲಾಗಿದ್ದ ವ್ಯಾಪಾರೀ ಮಾರ್ಗ, 2006ರಿಂದ ಎರಡೂ ದೇಶಗಳವರಿಗೆ ವ್ಯಾಪಾರಕ್ಕಾಗಿ ತೆರವಾಗಿದೆ. ಇಲ್ಲಿಗೆ ಬಂದ ನೆನಪಿಗಾಗಿ ಪ್ರವಾಸಿಗರಿಗೆ ಒಂದು ಸರ್ಟಿಫಿಕೇಟ್ ಕೊಡುತ್ತಾರೆ.

ತವಾಂಗ್ ಜಿಲ್ಲೆಯ ಶುಂಗಾಸ್ಟರ್ ಲೇಕ್, ಎತ್ತರದ ಕಡಿದಾದ ಪರ್ವತ ಶಿಖರಗಳ ನಡುವೆ ನೀಲಮಣಿಯಂತೆ ಹೊಳೆವ ತುಂಬು ಕೊಳ. ಶಾರೂಕ್ ಖಾನ್‌ನ 'ಕೊಯ್ಲಾ' ಹಿಂದಿ ಸಿನಿಮಾಕ್ಕೆ ಮಾಧುರಿ ದೀಕ್ಷಿತ್ ಡ್ಯಾನ್ಸ್ ಮಾಡಿದ್ದು ಇಲ್ಲೇ ಅಂತೆ! ಈ ಕೊಳ 'ಮಾಧುರಿ ಲೇಕ್' ಎಂದೇ ಹೆಸರಾಗಿದೆ. ಇದೊಂದು ಸ್ವರ್ಗೀಯ ದೃಶ್ಯದ ತಾಣ.

ಕೆಲವು ಮನೆಗಳ ಹೊರಭಾಗದಲ್ಲಿ ಪೂರ್ವಾಭಿಮುಖವಾಗಿ ಎತ್ತರದ ಅಗ್ಗಿಷ್ಟಿಕೆ ಹೂಡಿದ್ದು, ಬೆಳಿಗ್ಗೆ ಬೆಂಕಿ ಉರಿಸುತ್ತಾರೆ. ಅದು ಸೂರ್ಯನಿಗೆ ಪ್ರಣಾಮ ಸಲ್ಲಿಸುವುದು ಎಂದು ಟಿಬೆಟನ್ ತರುಣಿಯೊಬ್ಬಳು ತಿಳಿಸಿದಳು.

ಈಶಾನ್ಯ ಎಲ್ಲ ರಾಜ್ಯಗಳಂತೆ ಇಲ್ಲಿನ ಕುಟುಂಬಗಳಲ್ಲೂ ಮಹಿಳೆಯೇ ಮುಖ್ಯಸ್ಥೆ. ಮದುವೆಯಾಗುವಾಗ ವಧು ದಕ್ಷಿಣೆ ಸಲ್ಲಿಸಬೇಕು. ನಮ್ಮ ಟಾಟಾ ಸುಮೋದ ಡ್ರೈವರ್ ಮೋಂಪಾ ಬುಡಕಟ್ಟಿನ ತೇಂಜೀರ್‌ನನ್ನು ಈ ಕುರಿತು ಮಾತಿಗೆಳೆದೆವು. ' ನಮ್ಮ ಕುಟುಂಬದಲ್ಲಿ ಹತ್ತು ಜನರಿದ್ದಾರೆ. ತಾಯಿಯೇ ಯಜಮಾನಿತಿ. ಎಲ್ಲರೂ ದುಡಿಮೆಯ ಅಷ್ಟೂ ಹಣವನ್ನು ಅವಳ ಕೈಯ್ಯಲ್ಲಿಡುತ್ತೇವೆ. ಅವಳು ಕುಟುಂಬದ ಪ್ರತಿಯೊಬ್ಬರ ಹಿತ ಸಂರಕ್ಷಿಸುತ್ತಾಳೆ. ನನ್ನ ಇಬ್ಬರು ಪುಟ್ಟ ಮಕ್ಕಳಿಗೆ ಪ್ರತಿ ತಿಂಗಳೂ ಆರ್‌ಡಿ ಖಾತೆಯಲ್ಲಿ ಹಣ ಹಾಕುತ್ತಾಳೆ' ಎಂದ ತೇಂಜೀರ್. ಅವನ ಶಿಕ್ಷಕಿ ಪತ್ನಿಯೇ ಅವನಿಗೆ ಈ ವಾಹನ ಕೊಡಿಸಿದ್ದಂತೆ!

ಚಳಿಗಾಲದಲ್ಲಿ ಮೈನಸ್ ಡಿಗ್ರಿ ದಾಟುವ ವಿಪರೀತದ ಹವಾಮಾನ, ಜೀವನಾವಶ್ಯಕ ವಸ್ತುಗಳಿಗಾಗಿ ತೇಜ್‌ಪುರದಷ್ಟು ದೂರ ಬಂದು ಹೋಗಬೇಕಾದ ಅನಿವಾರ್ಯತೆ, ಪರ್ವತ ಪ್ರಾಂತ್ಯದ ಕಷ್ಟಮಯ ಜೀವನ– ಎಲ್ಲಕ್ಕೂ ಇಲ್ಲಿನ ಜನ ಹೊಂದಿಕೊಂಡಿದ್ದು, ಸಂತೃಪ್ತ ಜೀವನ ನಡೆಸುತ್ತಿದ್ದಾರೆ.

## ಭಾರತ- ಚೀನಾ ಕುದಿಬಿಂದು

೧೯೫೪ರಲ್ಲಿ ನೇಫಾ (ನಾರ್ಥ್ ಈಸ್ಟರ್ನ್ ಫ್ರಂಟಿಯರ್ ಏಜೆನ್ಸಿ) ರಚನೆಯಾಯಿತು. ರಾಜ್ಯವನ್ನು ಅದೇ ಹೆಸರಿನಿಂದ ಕರೆಯಲಾಗುತ್ತಿತ್ತು. ೧೯೭೨ರಲ್ಲಿ ಅರುಣಾಚಲ ಪ್ರದೇಶ ಎಂಬ ನಾಮಕರಣವಾಯಿತು. ಆಗ ಕೇಂದ್ರಾಡಳಿತ ಪ್ರದೇಶವಾಗಿದ್ದು, ೧೯೮೭ರಲ್ಲಿ ಪ್ರತ್ಯೇಕ ರಾಜ್ಯವಾಯಿತು. ೧೯೬೨ರ ಯುದ್ಧದಲ್ಲಿ ತವಾಂಗ್ ಸ್ವಲ್ಪ ಕಾಲ ಚೀನಾ ವಶದಲ್ಲೂ ಇತ್ತು. ಯುದ್ಧದ ನಂತರ ಚೀನಾ ತನ್ನ ಸೇನೆ ಹಿಂಪಡೆಯಿತು. ಆಗ ತವಾಂಗ್ ಭಾರತದ ಆಡಳಿತಕ್ಕೆ ಸೇರಿತು. ಭಾರತ– ಚೀನಾ ನಡುವಿನ ಕುದಿ ಬಿಂದು ಎಂದೂ ತವಾಂಗನ್ನು ಗುರುತಿಸಲಾಗುತ್ತದೆ.